**ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು, ಹುಣಸೂರು ಪೀಠ.**

**SC No**.227/2022

**PW**. 17

**CW**. 30

**ಸಾಕ್ಷಿಯ ಹೆಸರು –ಎಂ ಎಸ್ ಪುಟ್ಟರಾಜು**

**ತಂದೆಯ ಹೆಸರು –ಲೇ ಶಿವಣ್ಣ**

**ವಯಸ್ಸು – 61 ವರ್ಷಗಳು**

ದಿನಾಂಕ **17–03–2025** ರಂದು ಪ್ರಮಾಣವಚನ ಬೋಧಿಸಲಾಯಿತು.

**ಉದ್ಯೋಗ –ನಿವೃತ್ತ ಪಿ ಎಸ್ ಐ**

**ವಾಸಸ್ಥಳ –ಪಿರಿಯಾಪಟ್ಟಣ ಟೌನ್**

**ಮುಖ್ಯ ವಿಚಾರಣೆಃ– ಸರ್ಕಾರಿ ಅಭಿಯೋಜಕರಿಂದಃ–**

ನಾನು ದಿಃ 09–05–2020 ರಿಂದ ದಿಃ 03–10–2020 ರವರೆಗೆ ಬೆಟ್ಟದಪುರ ಪೊಲೀಸ್ ಠಾಣೆಯಲ್ಲಿ ಪಿ ಎಸ್ ಐ ಆಗಿ ಸೇವೆ ಸಲ್ಲಿಸಿರುತ್ತೇನೆ.

ದಿಃ 19–06–2020 ರಂದು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಚಾಸಾ–28 ರವರಿಂದ ಕಡತವನ್ನು ಪಡೆದು, ಪರಿಶೀಲಿಸಿ ತನಿಖೆ ಮುಂದುವರಿಸಿರುತ್ತೇನೆ. ಈ ಪ್ರಕರಣದಲ್ಲಿ ಅಮಾನತ್ತುಪಡಿಸಿಕೊಂಡಿದ್ದ ಫಿರ್ಯಾದುದಾರರಿಗೆ ಸೇರಿದ ಮೋಟರ್ ಸೈಕಲ್ ನಂ. ಕೆ ಎ 45 ವಿ 3742 ವಾಹನವನ್ನು ನ್ಯಾಯಾಲಯದ ಆದೇಶದ ಮೇರೆಗೆ ಫಿರ್ಯಾದುದಾರರ ವಶಕ್ಕೆ ನೀಡಿದ್ದೇನೆ. ಅದೇ ದಿನ ಬೆಟ್ಟದ ಪುರ ಗ್ರಾಮಪಂಚಾಯಿತಿಗೆ ಮನವಿ ಬರೆದು ಕೃತ್ಯ ನಡೆದ ಸ್ಥಳದ ಅಸೆಸ್ ಮೆಂಟ್ ಕಾಪಿ ಕೇಳಿರುತ್ತೇನೆ. ಅದೇ ದಿನ ಮಾನ್ಯ ಎಸ್ ಪಿ ರವರಿಗೆ ಮನವಿ ಸಲ್ಲಿಸಿ, ಮೊಬೈಲ್ ನಂ 9535211593 ಹಾಗೂ 8105127379 ಗಳ ಸಿ.ಡಿ.ಆರ್ ಮತ್ತು ಕೆ.ವೈ. ಸಿ ಫಾರಂ ಗಳನ್ನು ನೀಡುವಂತೆ ಮನವಿ ಸಲ್ಲಿಸಿರುತ್ತೇನೆ. ದಿಃ 08–08–2020 ರಂದು ಈ ಪ್ರಕರಣದಲ್ಲಿ ಜಪ್ತಿಯಾದ ಫಿರ್ಯಾದುದಾರರಿಗೆ ಸೇರಿದ ಮೋಟರ್ ಸೈಕಲ್ ನಂ. ಕೆ ಎ 45 ವಿ

3742 ವಾಹನವನ್ನು ನ್ಯಾಯಾಲಯದ ಆದೇಶದ ಮೇರೆಗೆ ಫಿರ್ಯಾದುದಾರರ ವಶಕ್ಕೆ ನೀಡಿದ್ದೇನೆ. ನಂತರ ನನಗೆ ವರ್ಗಾವಣೆಯಾದ ಕಾರಣ ಈ ಪ್ರಕರಣದ ಕಡತವನ್ನು ಚಾಸಾ-28 ರವರಿಗೆ ವಹಿಸಿಕೊಟ್ಟಿರುತ್ತೇನೆ.

**ಪಾಟೀಸವಾಲುಃ- ಆರೋಪಿ ಪರ ಶ್ರೀ ಎಸ್ ಪಿ ವಕೀಲರಿಂದಃ-**

ಏನೂ ಇಲ್ಲ ಎಂದು ತಿಳಿಸಿರುತ್ತಾರೆ.

**ಮರುವಿಚಾರಣೆಃ** ಇಲ್ಲ.

**ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

ಓ ಹೇ ಕೇ ಸರಿ ಇದೆ ಎಂದು ಒಪ್ಪಿದ ಮೇರೆಗೆ,

ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು, ಹುಣಸೂರು ಪೀಠ.